# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 234 (275) |
| ಸದಸ್ಯರ ಹೆಸರು | ಶ್ರೀ. ಛಲವಾದಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ) |
| ವಿಷಯ | ಮಾಸಿಕ ಪಿಂಚಣಿ ಕುರಿತು |
| ಉತ್ತರಿಸಬೇಕಾದ ದಿನಾಂಕ | 15/02/2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| ಪ್ರಶ್ನೆ | ಉತ್ತರ |
| ಅ) ರಾಜ್ಯದಲ್ಲಿ ವಿವಿಧ ಯೋಜನೆಯಡಿಯಲ್ಲಿ ಮಾಸಿಕ ಪಿಂಚಣಿ ಪಡೆಯುತ್ತಿರುವ ವೃದ್ಧರಿಗೆ / ವಿಧವೆಯರಿಗೆ/ ಅಂಗವಿಕಲರಿಗೆ/ ಅವಿವಾಹಿತ ಮಹಿಳೆಯರಿಗೆ ಸರಿಯಾದ ಸಮಯಕ್ಕೆ (ತಿಂಗಳಗೊಮ್ಮೆ) ಪಿಂಚಣಿ ಪಾವತಿ- ಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರತಿ ತಿಂಗಳು ಖಜಾನೆಯಲ್ಲಿ ಬಿಲ್ಲು ತಯಾರಿಸಿ ನಿಗದಿತ ಸಮಯದಲ್ಲಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |
| ಆ) ಮಾಸಿಕ ಪಿಂಚಣಿ ಪಡೆಯುತ್ತಿರುವವರಿಂದ ಹಣ ವಸೂಲಿ ಮಾಡಿರುವ ಪ್ರಕರಣಗಳು ದಾಖಲಾಗಿವೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಯಾವುದು ಇರುವುದಿಲ್ಲ. |
| ಇ) ಹಿರಿಯ ನಾಕರೀಕರಿಗಾಗಿ ಇರುವ ಯೋಜನೆಗಳಾವುವು; ಆ ಯೋಜನೆಯನ್ನು ಹಿರಿಯ ನಾಗರೀಕರಿಗೆ ಹೇಗೆ ತಲುಪಿಸಲಾಗುತ್ತಿದೆ; (ವಿವರ ನೀಡುವುದು) | ಸಾಮಾಜಿಕ ಭದ್ರತಾ ಯೋಜನೆಗಳಡಿ ಹಿರಿಯ ನಾಕರೀಕರಿಗಾಗಿ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯನ್ನು ರಾಜ್ಯದ್ಯಂತ ಜಾರಿಗೊಳಿಸಿದೆ.<br>ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರತಿ ತಿಂಗಳು ಖಜಾನೆಯಲ್ಲಿ ನಿಗದಿತ ಅವಧಿಯಲ್ಲಿ ಬಿಲ್ಲು ತಯಾರಿಸಿ ನೇರವಾಗಿ ಪಿಂಚಣಿ ಪಾವತಿಸುವ ನಿಟ್ಟಿನಲ್ಲಿ ಫಲಾನುಭವಿಗಳ ಬ್ಯಾಂಕ್/ ಅಂಚೆ ಉಳಿತಾಯ ಖಾತೆಯ ಪಿಂಚಣಿ ಮೊತ್ತ ಜಮಾ ಮಾಡಲಾಗುತ್ತಿದೆ.<br>ಹಿರಿಯ ನಾಗರೀಕರು ಹೊಸದಾಗಿ ಪಿಂಚಣಿ ಸೌಲಭ್ಯ ಪಡೆಯಲು ನವೋದಯದಡಿ ಈ ಕೆಳಕಂಡ ಯೋಜನೆಗಳು ಜಾರಿಗೊಳಿಸಿದೆ.<br>1. "ನವೋದಯ" ಮೊಬೈಲ್ ಆ್ಯಪ್ ಬಳಸಿ ಫಲಾನುಭವಿಗಳಿಂದ ಮಾಹಿತಿ ಸಂಗ್ರಹಣೆ ಭಾವಚಿತ್ರ ಹಾಗೂ ಖಾತೆ ಮಾಹಿತಿ ಪಡೆದು ತಿಳುವಳಿಕೆ ಪತ್ರ ನೀಡಿ ಆದಾಯ ಹಾಗೂ ವಯೋಮಿತಿ ಆಧಾರದ ಮೇಲೆ ಸ್ವಯಂ ಪ್ರೇರಿತವಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅರ್ಜಿ ರಹಿತವಾಗಿ ಮನೆಬಾಗಿಲಿಗೆ ಮಂಜೂರಾತಿ ಆದೇಶ ವಿತರಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗಿರುತ್ತದೆ.<br>2. ವೃದ್ಧರು, ಅಸಹಾಯಕರು ಪಿಂಚಣಿಗಾಗಿ ಅಲೆದಾಡುವುದನ್ನು ತಪ್ಪಿಸಲು ಮನೆ ಬಾಗಿಲಿಗೆ ಮಾಸಾಶನ ಯೋಜನೆಯಡಿ ದೂರವಾಣಿ ಮೂಲಕವೇ ಪಿಂಚಣಿ ಕೋರಿಕೆಯನ್ನು "ಹಲೋ ಕಂದಾಯ ಸಚಿವರೇ"ಸಹಾಯವಾಣಿ ಮುಖಾಂತರ 72 ಗಂಟೆಯಲ್ಲಿ ಪಿಂಚಣಿ ಮಂಜೂರಾತಿ ನೀಡಲಾಗಿದೆ. |
| ಈ) ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಹಿರಿಯ ನಾಗರೀಕರಿಗೆ ಈ ಸೌಲಭ್ಯ ಮಾಹಿತಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸೌಲಭ್ಯದ ಅರಿವು ಮೂಡಿಸುವ ನಿಟ್ಟಿನಲ್ಲಿ ಸರ್ಕಾರದ ಕೈಗೊಂಡ ಕ್ರಮಗಳೇನು? | ಸರ್ಕಾರದಿಂದ ಕಾಲಕಾಲಕ್ಕೆ ಅನುಷ್ಠಾನಗೊಳ್ಳುವ ಹಾಗೂ ಅನುಷ್ಠಾನದಲ್ಲಿರುವ ಎಲ್ಲಾ ಯೋಜನೆಗಳ ಮಾಹಿತಿ ಕುರಿತು ದಿನಪತ್ರಿಕೆ, ದೂರದರ್ಶನ ಹಾಗೂ ರೇಡಿಯೋ ಜಾಹೀರಾತುಗಳಲ್ಲಿ ಪ್ರಚಾರ ಪಡಿಸಲಾಗಿದೆ.<br>ಎಲ್ಲಾ ಜಿಲ್ಲೆಗಳಲ್ಲಿ/ ತಾಲ್ಲೂಕು ನಾಡಕಛೇರಿಗಳಲ್ಲಿ ನಾಮಫಲಕದಲ್ಲಿ ಯೋಜನೆಗಳ ಕುರಿತು ವಿವರಗಳನ್ನು ಅಳವಡಿಸಲಾಗಿದೆ. |

ಕಡತ ಸಂಖ್ಯೆ:**DSSP-LALC0LCQ/01/2023**

(ಆರ್.ಅಶೋಕ)
ಕಂದಾಯ ಸಚಿವರು